ಸುರೇಶ? ನಿನ್ನ ನ್ಯಾಯ ಎಂತದ್ದು ಅಂತ ಭಗವತಿ ಕಾಣ್ತಿದ್ದಾಳಲ್ಲ. ಬೆಂಕಿಯಲ್ಲಿ ಬೆಂದು ಭಗವತಿಯಾದವಳ ಕಾರಣೀಕ ನಿಂಗೆ ಅರ್ಥವಾಗಿದಿದ್ರೆ ನೀನು ಮಗಳನ್ನು ದೂಡ್ತಿರಲಿಲ್ಲ. ನೀನು ಸೌಖ್ಯದಲ್ಲಿದ್ರೆ ಕೆಲಸಕ್ಕೆ ಹೊರಡು" ಮುಚ್ಚಿದ ಬಾಗಿಲು ನೋಡುತ್ತ ಕನಲಿ ಹೇಳಿದ ಫಕೀರಿಚ್ಚ.

ನಿನ್ನೆ ಫಕೀರಿಚ್ಚನ ಹತ್ತಿರ ನೆಬಿಸುಮ್ಮ ಸುರೇಶ ಇವಳನ್ನು ಮನೆಗೆ ಸೇರಿಸ್ತಾನಾ? ಅಂದಾಗ ಹೇಗೋ ಸೇರಿಕೊಳ್ಳಬಹುದೆಂಬ ಹುಂಬ ಧೈರ್ಯ, ಆಸೆ, ಭರವಸೆ ಎಲ್ಲ ಇತ್ತು ರಕ್ಷಾಳಿಗೆ. ಈಗ ಇದ್ದಕ್ಕಿದ್ದಂತೆ ಏನೋ ಒಂದು ಕಳಚಿ ಬಿದ್ದಂತಾಯ್ತು. ಅದೇ ಕ್ಷಣದಲ್ಲಿ ಇಷ್ಟು ದಿನ ತನ್ನೊಳಗಿಲ್ಲದ ಏನೋ ಒಂದು ಒಳ ಹೊಕ್ಕಂತೆ ಫಕೀರಿಚ್ಚನ ಮುಖ ನೋಡಿದಳು.

"ಫಕೀರಿಚ್ಚ, ನನ್ನನ್ನು ಅಮ್ಮ ತೊಟ್ಟಿಲಿಗೆ ಕರ್ಕೊಂಡು ಹೋಗಿ" ಅಂದಳು. ಕ್ಷಣ ಹೊತ್ತು ಅವಳೇನು ಹೇಳಿದಳೆಂದು ಫಕೀರಿಚ್ಚನಿಗೆ ಅರ್ಥವೇ ಆಗಲಿಲ್ಲ. ಆಕೆಯ ಮಾತು ಅರ್ಥವಾದಾಗ ತನ್ನ ಅಸಹಾಯಕತೆಗೆ ಕುಗ್ಗಿ ಹೋದ.

"ಮೋಳೇ, ಅದು ನಿನ್ನಂತವರಿಗಿರುವುದಲ್ಲ. ಸರ್ಕಾರ ಅದನ್ನು ಮಾಡಿದ್ದು ಬೇಡದ ಶಿಶುವನ್ನು ಎಲ್ಲಿಯಾದ್ರು ಬಿಸಾಕಿ ಹೋಗುವವರು ಅಲ್ಲಿ ತಂದು ಬಿಡಲಿ ಅಂತ. ಅಂತಹ ಮಕ್ಕಳನ್ನು ಗವರ್ನ್ಮೆಂಟ್ ಆಸ್ಪತ್ರೆಯಿಂದ ಯಾವುದಾದ್ರೂ ಆಶ್ರಮದವರು ಕೊಂಡು ಹೋಗಿ ಸಾಕ್ತಾರೆ."

"ನಾನು ಆ ಸಂಗತಿ ಪೇಪರಲ್ಲಿ ಓದಿದೇನೆ ಫಕೀರಿಚ್ಚ. ಅದಕ್ಕೇ ಹೇಳಿದ್ದು ಅಲ್ಲಿಗೆ ಕರ್ಕೊಂಡು ಹೋಗ್ತೀರಾ ಅಂತ? ನಂಗೆ ಯಾವ ಆಶ್ರಮವೂ ಗೊತ್ತಿಲ್ಲ. ಅಮ್ಮ ತೊಟ್ಟಿಲಿಗೆ ಹೋದ್ರೆ ಅಲ್ಲಿಂದ ಮತ್ತೆ ಆಶ್ರಮಕ್ಕೆ ಸೇರಿಸ್ತಾರಲ್ಲ. ನಾನು ಸಾಯುವುದಿಲ್ಲ. ನಂಗೆ ಬದುಕ್ಬೇಕು ಫಕೀರಿಚ್ಚ." ಮುಂದಿನ ದಾರಿ ನಿಚ್ಚಳವಾಯ್ತು ಫಕೀರಿಚ್ಚನಿಗೆ.

"ನಡಿ ಹೋಗುವ ಮೋಳೆ, ನಿನ್ನನ್ನು ಪರವನಡ್ಕ ಆಶ್ರಮಕ್ಕೇ ಕರ್ಕೊಂಡು ಹೋಗ್ತೇನೆ. ನಿಂಗೆ ಶಾಲೆ ಕಲಿಯುವ ಏರ್ಪಾಡು ಮಾಡ್ತೇನೆ" ಅನ್ನುತ್ತ ರಿಕ್ಷಾ ಚಾಲೂ ಮಾಡಿದ ಫಕೀರಿಚ್ಚ. ಫಕೀರಿಚ್ಚನ ಮಡಿಲಲ್ಲಿ ಮುಖ ಹುದುಗಿಸಿ ಇನ್ನೂ ಏನೇನೋ ಹೇಳಬೇಕೆನಿಸುತ್ತಿತ್ತು ಅವಳಿಗೆ.

ರಿಕ್ಷಾ ಚಲಿಸುತ್ತಿರುವ ರಸ್ತೆಯ ಇಬ್ಬದಿಗಳಲ್ಲಿ ಕಟ್ಟಿದ ಪ್ಲಾಸ್ಟಿಕ್ ತೋರಣ ಗಾಳಿಗೆ ಪಟಪಟ ಬಡಿದುಕೊಳ್ಳುತ್ತಿತ್ತು. ಮೂರ್ನಾಲ್ಕು ದಿನಗಳಲ್ಲೇ ಆರಂಭವಾಗಲಿರುವ ಭಗವತಿ ಕ್ಷೇತ್ರದ ಬ್ರಹ್ಮ ಕಲಶೋತ್ಸವಕ್ಕೆ ಕಣ್ಣೂರು ಮಸೀದಿಯಿಂದ, ಪುತ್ತಿಗೆಯ ಮಸೀದಿಯಿಂದ ಹೊರೆ ಕಾಣಿಕೆ ಬರುವುದಿತ್ತು. ಕಳೆದ ಬಾರಿ ಭಗವತಿ ಕ್ಷೇತ್ರದಿಂದ ಪುತ್ತಿಗೆಯ ಉರುಸ್ಸಿಗೆ ಹೊರೆ ಕಾಣಿಕೆ ಹೋಗುವ ದಿನ ಸುರೇಶನೇ ಅದಕ್ಕೆ ಮುಂದಾಳಾಗಿದ್ದುದು ನೆನಪಾಗಿ ರಿಕ್ಷಾ ಹ್ಯಾಂಡಲ್ಲಿನಿಂದ ಒಂದು ಕೈ ತೆಗೆದು ಎದೆಯ ಮೇಲಿಟ್ಟುಕೊಂಡು ಪಡಚ್ಚೋನೆ! ಅಂದ ಫಕೀರಿಚ್ಚ.

## ಅನುಪಮಾ ಪ್ರಸಾದ್

ಕತೆಗಾರ್ತಿ ಅನುಪಮಾ ನಾಟಕ, ಜೀವನಚರಿತ್ರೆಗಳನ್ನು ಬರೆದಿದ್ದಾರೆ. ಪ್ರಸ್ತುತ ಕಾಸರಗೋಡು ಜಿಲ್ಲೆಯ ಕುಂಬಳೆ ಸಮೀಪದ ಪೆರ್ಣೆಯಲ್ಲಿ ನೆಲೆಸಿದ್ದಾರೆ.

'ಚೇತನಾ', 'ಕರವೀರದ ಗಿಡ', 'ದೂರತೀರ' ಅವರ ಕಥಾ ಸಂಗ್ರಹಗಳಾಗಿವೆ. 'ಜೋಗತಿ ಜೋಳಿಗೆ' ಎಂಬ ಅವರ ಕತೆಗಳ ಸಂಗ್ರಹ ಶಿವಮೊಗ್ಗದ 'ಅಹರ್ನಿಶಿ' ಪ್ರಕಾಶನದಿಂದ ಇತ್ತೀಚೆಗೆ ಪ್ರಕಟವಾಗಿದೆ. ಎರಡು ನಾಟಕಗಳನ್ನು ಅವರು ಬರೆದಿದ್ದು, ಕತೆಗಾರ ಎಂ. ವ್ಯಾಸ ಅವರ ಜೀವನಚಿತ್ರವನ್ನು 'ಅರ್ಧ ಕಥಾನಕ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇದು ವ್ಯಾಸರ ಮಗ ಎಂ. ತೇಜಸ್ವಿ ಅವರ ನೆನಪನ್ನು ಆಧರಿಸಿದ್ದು.